# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
## (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ,
ನಂ.29, ವಿಜಯನಗರ 2ನೇ ಹಂತ
ಹಿನಕಲ್, ಮೈಸೂರು-17
CIN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ,ಬನ್ನೂರು
ದೂರವಾಣಿ ಸಂಖ್ಯೆ : 08227 275506/07
E-Mail ID : cescbannur@gmail.com

ದಿನಾಂಕ 24.10.2017 ರಂದು ಬೆಳಿಗ್ಗೆ 11.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ಕ), ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ (ಇಲಾಖೆ ಪರೀಕ್ಷೆ ನಡೆಯುತ್ತಿದ್ದ ಕಾರಣ ಸಭೆಗೆ ಅಧೀಕ್ಷಕ ಇಂಜಿನಿಯರ್ (ವಿ) ರವರ ಬದಲು ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸಭೆ ನಡೆಸಿಕೊಟ್ಟರು) ಬನ್ನೂರು ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

| | |
|---|---|
| ಶ್ರೀ ಸೋಮರಾಜ್ | ಕಾರ್ಯನಿರ್ವಾಹಕ ಇಂಜಿನಿಯರ್ (ಕ), ಚಾವಿಸನಿನಿ, ಕಾ ಮತ್ತು ಪಾ ವೃತ್ತ, ಮೈಸೂರು. |
| ಶ್ರೀ ಸುನೀಲ್‌ಕುಮಾರ್ ಎ ಎ | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ನಂಜನಗೂಡು. |
| ಶ್ರೀ ಶಂಕರ್ ಎ ಎಂ | ಸ.ಕಾ.ಇಂ (ವಿ) ಚಾವಿಸನಿನಿ, ಬನ್ನೂರು ಉಪ-ವಿಭಾಗ. |
| ಶ್ರೀಮತಿ ನಾಗವೇಣಿ ಎಂ | ಸ.ಇಂ (ವಿ) ತಾಂತ್ರಿಕ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಹರೀಶ್ ಜಿ | ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ, ಮಾದಿಗಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಶ್ವನಾಥ್ ಎಸ್ ಎಲ್ | ಸ.ಇಂ (ವಿ) ಚಾಮನಹಳ್ಳಿ ಶಾಖೆ , ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ತ್ಯಾಗರಾಜು ಟಿ | ಕಿ.ಇಂ (ವಿ) ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಜಯ್‌ಕುಮಾರ್ ಕೆ | ಕಿ.ಇಂ (ವಿ) ತುಂಬಲ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಆದ ಶ್ರೀ ಶಂಕರ್ ಎ ಎಂ ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು, ರೈತರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ :20.07.2017 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ **ಕಾರ್ಯನಿರ್ವಾಹಕ ಇಂಜಿನಿಯರ್** (ಕ), ರವರು ಕೂಲಂಕುಷವಾಗಿ ಪರಿಶೀಲಿಸಿ, 18 ದೂರುಗಳಲ್ಲಿ 12 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು ಉಳಿದ 6 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ

ರೈತಮುಖಂಡರು, ರೈತರು ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಸಿದ್ದೇಗೌಡ, ಬನ್ನೂರು, 8050330427 | ಇವರು ತಮ್ಮ ಜಮೀನಿನಲ್ಲಿರುವ ಶಿಥಿಲಗೊಂಡಿರುವ ಕಂಬವನ್ನು ಬದಲಾಯಿಸುವಂತೆ ದೂರು ಸಲ್ಲಿಸಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 2. | ಶ್ರೀ ಕರಿಯಪ್ಪ ಬಿನ್ ವಡ್ಡಲಯ್ಯ, ಮಾದಿಗಹಳ್ಳಿ | ಭುಗತಹಳ್ಳಿಯಲ್ಲಿರುವ ತಮ್ಮ ಜಮೀನಿನ ಒಳಗೆ ಸ್ಥಾಪಿಸಿರುವ ಪರಿವರ್ತಕದಿಂದ ತುಂಬ ತೊಂದರೆಯಾಗುತ್ತಿದ್ದು, ಪರಿವರ್ತಕವನ್ನು ಸ್ಥಳಾಂತರಿಸುವಂತೆ ಲಿಖಿತ ದೂರು ಸಲ್ಲಿಸಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 3. | ಶ್ರೀ ನಾರಾಯಣ, ಬನ್ನೂರು, ಕಬ್ಬು ಬೆಳೆಗಾರರ ಸಂಘ, 7353103873 | ಇವರು ಐಪಿ ಸ್ಥಾವರಗಳಿಗೆ ಎಲ್ ಟಿ ಮಾರ್ಗಗಳನ್ನು ಇಲಾಖವತಿಯಿಂದ ಮಂಜೂರು ಮಾಡಿಕೊಡಬೇಕೆಂದು ಶ್ರೀ ವೆಂಕಟೇಶ್ ರವರ(9008712375) ಪರವಾಗಿ ಕೇಳಿದರು.<br>ಗಾಣಿಗನಕೊಪ್ಪಲು ಬೋರೇ ದೇವರ ದೇವಸ್ಥಾನಕ್ಕೆ ಕಲ್ಪಿಸಿರುವ ವಿದ್ಯುತ್ ಸಂಪರ್ಕ ಮಾರ್ಗದಲ್ಲಿ ಬಾಗಿರುವ ಕಂಬವನ್ನು ಸರಿಪಡಿಸುವಂತೆ ದೂರಿರುತ್ತಾರೆ.<br>ಆಫೀಸಿನ ಎದುರುಗಡೆಯಿರುವ ಕಂಬಗಳ ಸುತ್ತಲು ಬೆಳೆದಿರುವ ಪೊದೆಗಳನ್ನು ತೆಗೆಸಬೇಕೆಂದು ದೂರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಐಪಿ ಸ್ಥಾವರಗಳಿಗೆ ಎಲ್ ಟಿ ಮಾರ್ಗಗಳನ್ನು ಇಲಾಖವತಿಯಿಂದ ಮಂಜೂರು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ<br>ಕಾ.ನಿ.ಇಂ(ಕ) ರವರು ಶಾಖಾಧಿಕಾರಿಗೆ ಶೀಘ್ರವಾಗಿ ಕೆಲಸ ಮುಗಿಸಿ ಕಾ.ನಿ.ಇಂ(ವಿ) ರವರಿಗೆ ಮಾಹಿತಿ ನೀಡಲು ತಿಳಿಸಿರುತ್ತಾರೆ. |
| 4. | ಶ್ರೀ ಡಿ ರಾಜು, ಅತ್ತಳ್ಳಿ, 8722399791 | ಟಿ ವಿ ಕೇಬಲ್ ಅನ್ನು ವಿದ್ಯುತ್ ಕಂಬಗಳ ಮೇಲೆ ಎಳೆದಿರುವುದರಿಂದ (ಬನ್ನೂರು ಸಂತೆಮಾಳ) ಅಪಘಾತ ಸಂಭವಿಸುವ ಸಾಧ್ಯವಿರುವುದರಿಂದ ಕೇಬಲ್‌ಗಳನ್ನು ತೆರವುಗೊಳಿಸಿ ಎಂದು ದೂರಿರುತ್ತಾರೆ.<br>ಮಲಿಯೂರು ಫ್ಯಾಕ್ಟರಿಗೆ ರೈತರು ನೀರನ್ನು ಐಪಿ ಸೆಟ್ ಸ್ಥಾವರದಿಂದ ನೀಡುತ್ತಿರುವುದಾಗಿ ತಿಳಿಸಿ, ಪರಿಶೀಲಿಸಲು ಕೋರಿರುತ್ತಾರೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ವಿದ್ಯುತ್ ಕಂಬಗಳ ಮೇಲಿರುವ ಟಿ ವಿ ಕೇಬಲ್ ತೆಗೆದು ಹಾಕಲು ಕ್ರಮವಹಿಸುಂತೆ ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ಸೂಚಿಸಿದರು. |

| | | | |
|---|---|---|---|
| 5. | ಶ್ರೀ ರಂಗಸ್ವಾಮಿ,<br>ಮೇಘಳಕೊಪ್ಪಲು,<br>ಕಬ್ಬು ಬೆಳೆಗಾರರ ಸಂಘ,<br>9141528082 | ಮೇಘಳಕೊಪ್ಪಲು ಗ್ರಾಮದ ಗೃಹಬಳಕೆಗಾಗಿ ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸೂಚಿಸಿದರು |
| 6. | ಶ್ರೀ ಸ್ವಾಮಿ,<br>ಕುಂತನಹಳ್ಳಿ<br>8970070739 | ಕುಂತನಹಳ್ಳಿ ಹಿ. ಪ್ರಾ.ಶಾಲೆಯ ಹತ್ತಿರ ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸೂಚಿಸಿದರು |
| 7. | ಶ್ರೀ ಅಭಿಲಾಷ್,<br>ಸೇನಾಪತಿಹಳ್ಳಿ,<br>7204803775 | ಐಪಿ ಸ್ಥಾವರಗಳಿಗೆ ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸೂಚಿಸಿದರು |
| 8. | ಶ್ರೀಮತಿ ರೇವತಿ ಎಲ್.ಪಿ<br>ಜೈ ಕರ್ನಾಟಕ ಮಹಿಳಾ ಅಧ್ಯಕ್ಷೆ | ಕಛೇರಿ ಸಿಬ್ಬಂದಿಗಳು ಸಾರ್ವಜನಿಕರ ಜೊತೆ ಸಭ್ಯತೆಯಿಂದ ನಡೆದುಕೊಳ್ಳುವುದಿಲ್ಲ ಎಂದು ದೂರಿದರು.<br>ರಂಗಸಮುದ್ರದಲ್ಲಿ ಚರಂಡಿ ಪಕ್ಕದಲ್ಲಿರುವ ಕಂಬ ಬದಲಾಯಿಸುವಂತೆ ದೂರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಎಲ್ಲಾ ಸಿಬ್ಬಂದಿಗಳಿಗೆ ಸಭ್ಯತೆಯಿಂದ ನಡೆದುಕೊಳ್ಳುವಂತೆ ಸೂಚಿಸಿದರು.<br>ರಂಗಸಮುದ್ರದ ಕೆಲಸ ಪೂರ್ಣಗೊಂಡಿದೆ ಎಂದು ಶಾಖಾಧಿಕಾರಿಗಳು ತಿಳಿಸಿದರು. |
| 9. | ಶ್ರೀ ಚಿಕ್ಕಣ್ಣ ಬಿನ್ ಕೋಡ್ಲತಿಮ್ಮೇಗೌಡ,<br>ಸೇನಾಪತಿಹಳ್ಳಿ | ಮಳೆ ಗಾಳಿಯಿಂದ ಮುರಿದುಹೋಗಿರುವ ಕಂಬಗಳನ್ನು ಬದಲಾಯಿಸುವಂತೆ ದೂರಿದರು. | ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಸ.ಕಾ.ನಿ ಇಂಜಿನಿಯರ್ ರವರಿಗೆ ಸ್ಥಳ ಪರಿಶೀಲಿಸುವಂತೆ ತಿಳಿಸಿದರು. |
| 10. | ಶ್ರೀ ರಂಗರಾಜು,<br>ಹೆಗ್ಗೂರು,<br>ಕಬ್ಬು ಬೆಳೆಗಾರರ ಸಂಘ,<br>9980643300 | ಹೆಗ್ಗೂರು ಗ್ರಾ. ಪಂ ವ್ಯಾಪ್ತಿಯ ಕುಡಿಯುವ ನೀರು ಸ್ಥಾವರದ ಪರಿವರ್ತಕವನ್ನು ನಿರಂತರ ಜ್ಯೋತಿ ಫೀಡರ್ ನಿಂದ ವಿದ್ಯುತ್ ಸರಬರಾಜು ಮಾಡುತ್ತಿಲ್ಲವೆಂದು ದೂರಿದರು.<br>ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ದೂರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಿ ಸ್ಥಳ ಪರಿಶೀಲಿಸಿ ತುರ್ತು ಕ್ರಮ ಕೈಗೊಳ್ಳುವಂತೆ ತಿಳಿಸಿದರು.<br>**ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು** ಹೆಗ್ಗೂರು ಗ್ರಾ. ಪಂ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಸಭೆ ನಡೆಸಿ ವಿವರ ನೀಡುವಂತೆ **ಸ.ಕಾ.ನಿ ಇಂಜಿನಿಯರ್** ರವರಿಗೆ ತಿಳಿಸಿದರು. |
| 11. | ಶ್ರೀಮತಿ ಪದ್ಮಮ್ಮ ಕೋಂ ರಂಗಸ್ವಾಮಿ<br>ಸೇನಾಪತಿಹಳ್ಳಿ, | ಇವರ ಮನೆಯ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಯನ್ನು ಸ್ಥಳಾಂತರ ಮಾಡಿಕೊಡಬೇಕೆಂದು ಲಿಖಿತ ದೂರು ಸಲ್ಲಿಸಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು, ಸದರಿಯವರಿಗೆ ನಿಗಮದ ನಿಯಮಾನುಸಾರ ಹಣ ಪಾವತಿಸಿ ವಿದ್ಯುತ್ ತಂತಿಯನ್ನು ಶಿಫ್ಟ್ ಮಾಡಿಸಿಕೊಳ್ಳುವಂತೆ ತಿಳಿಸಿದರು. |

| | | | |
|---|---|---|---|
| 12. | ಸಿ ಟಿ ಕೃಷ್ಣ, ಸಿವಿ.ಕೊಪ್ಪಲು (ಕೆಂಪನಪುರ), 9448575850 | ಚಿದರವಳ್ಳಿ ಗ್ರಾಮದ 100ಕೆವಿಎ ಪರಿವರ್ತಕವು ಸುಟ್ಟುಹೋಗಿ ಒಂದು ವಾರವಾದರು ಬದಲಾಯಿಸಿಲ್ಲ ಎಂದು ದೂರಿದರು.<br>ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ತುರ್ತಾಗಿ ಕ್ರಮವಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 13. | ಶ್ರೀ ರಾಮಕೃಷ್ಣ ಅತ್ತಳ್ಳಿ, 9880232518 | ಇವರ ಜಮೀನಿನ ಮೇಲೆ ಹಾದು ಹೋಗಿರುವ ಚಂದಳ್ಳಿ-ಚಾಮುಂಡೇಶ್ವರಿ ಐಪಿ ವಿದ್ಯುತ್ ಮಾರ್ಗದ 10 ಕಬ್ಬಿಣದ (ಬಾಗಿದ) ಕಂಬವನ್ನು ಬದಲಾಯಿಸಿಕೊಡುವಂತೆ ದೂರಿದರು. | ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 14. | ಶ್ರೀ ರಾಮು, ಗೊರವನಹಳ್ಳಿ, 9164517722 | **ನಿರಂತರ ಜ್ಯೋತಿ ಫೀಡರ್ ಯಿಂದ** ಐಪಿ ಸ್ಥಾವರಗಳ ಬೇರ್ಪಡಿಸುವಿಕೆ ಸಂಬಂದವಾಗಿ ಪರಿವ್ತಕದ ಸಂಪರ್ಕವನ್ನು ತೆಗೆದುಹಾಕಿರುತ್ತಾರೆ, ಆದರೆ ಇನ್ನೂ ಐಪಿ ಫೀಡರ್ ಮೇಲೆ ಸಂಪರ್ಕವನ್ನು ನೀಡಿರುವುದಿಲ್ಲ. ಹಾಗೂ ಪರಿವರ್ತಕವು ಸುಟ್ಟುಹೋಗಿರುತ್ತದೆ ಬದಲಾಯಿಸಿಕೊಡುವಂತೆ ದೂರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಶಾಖಾಧಿಕಾರಿಗಳಿಗೆ ಸುಟ್ಟುಹೋಗಿರುವ ಪರಿವರ್ತಕವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.<br>ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಶೀಘ್ರವಾಗಿ ಸಲ್ಲಿಸುವಂತೆ ಸೂಚಿಸಿದರು. |
| 15. | ಶ್ರೀಮತಿ ಲಿಂಗಮ್ಮ, ಬೇವಿನಹಳ್ಳಿ, 9880934265 | ಇವರ ಮನೆಯ ಆರ್ ಆರ್ ಸಂಖ್ಯೆ ಃಐ-೬೩ ರ ವಿದ್ಯುತ್ ಸಂಪರ್ಕವನ್ನು ಪಕ್ಕದ (ಮನೆಯ ಮರ ತೆಗೆಯಲು) ಕಡಿತಗೊಳಿಸಿ ತುಂಬ ದಿನಗಳಾಗಿದ್ದರು ಪುನರ್ ಸಂಪರ್ಕ ನೀಡಿಲ್ಲವೆಂದು ಲಿಖಿತ ದೂರು ನೀಡಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ರವರು ಶೀಘ್ರವಾಗಿ ಪುನರ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

ಪಿ.ಎಂ.[signature]

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಹಿಸ/ಬ/2017-18/**835-844** ದಿನಾಂಕ : 25.10.2017

ಪ್ರತಿಗಳು.

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.